ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.

ಸಿ.ಸಿ ನಂಬರ್ಃ **804/2016**

ಪಿರ್ಯಾದಿ : ರಾಜ್ಯ, ಪರವಾಗಿ ವಲಯ ಅರಣ್ಯ ಅಧಿಕಾರಿಗಳು, ಕಳಸ.

ವಿರುದ್ಧ

ಆರೋಪಿತರು : **1.** ಫಿಲೋಮಿನಾ ಫೆರಿಸ್,
ಕೋಂ ಡಾಃ ದಿವಂಗತ ಸಿ.ಪಿ. ಫೆರಿಸ್.

**2.** ಮೈಕಲ್ ಫೆರಿಸ್,
ಬಿನ್ ಡಾಃ ದಿವಂಗತ ಸಿ.ಪಿ. ಫೆರಿಸ್.

**3.** ಆಂಡ್ರ್ಯೂ ಫೆರಿಸ್,
ಬಿನ್ ಡಾಃ ದಿವಂಗತ ಸಿ.ಪಿ. ಫೆರಿಸ್.

**4.** ಲೋಕ್ ಫೆರಿಸ್,
ಬಿನ್ ಡಾಃ ದಿವಂಗತ ಸಿ.ಪಿ. ಫೆರಿಸ್.
**(**ಪ್ರತ್ಯೇಕಿಸಲಾಗಿದೆ**)**

**5.** ಹೊಳಿಯಪ್ಪ,
ವ್ಯವಸ್ಥಾಪಕ.

ಎಲ್ಲರೂ ವಾಸಃ ಆವಂತಿ ಎಸ್ಟೇಟ್, ಹಾದಿಓಣಿ ಗ್ರಾಮ,
ಮಾಗುಂಡಿ ಅಂಚೆ, ಮೂಡಿಗೆರೆ ತಾಲ್ಲೂಕು.

* * * * *

ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿತರ ಹೇಳಿಕೆ

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 2) ಪ್ರಾಸಾ-1 ಜಿ.ವಿ.ಸತೀಶ ಮತ್ತು ಪ್ರಾಸಾ-2 ಮಹೇಶ್ ಕರಿಕಟ್ಟಿ ರವರು ತಮ್ಮ ಸಾಕ್ಷ್ಯದಲ್ಲಿ ಅವಂತಿ ಎಸ್ಟೇಟ್ ನ ಮಾಲೀಕರಾದ ಈ ಪ್ರಕರಣದ 1 ರಿಂದ 3 ನೇ ಆರೋಪಿತರಾದ ನೀವು ಈ ಪ್ರಕರಣದಿಂದ ಪ್ರತ್ಯೇಕಿಸಲ್ಪಟ್ಟ 4 ನೇ ಆರೋಪಿ ಹಾಗೂ ವ್ಯವಸ್ಥಾಪಕರಾದ 5 ನೇ ಆರೋಪಿಯಾದ ನೀವುಗಳು ನಿಮ್ಮ ಹಿಡುವಳಿಗೆ ಹೊಂದಿಕೊಂಡಿರುವ ಡೀಮ್ಡ್ ಫಾರೆಸ್ಟ್ ಸ.ನಂ.23 ರಲ್ಲಿ 134 ಎಕರೆ 10 ಗುಂಟೆ ಜಮೀನನ್ನು ಒತ್ತುವರಿ ಮಾಡಿರುವ ಬಗ್ಗೆ ಅರಣ್ಯ

ಕಾಯಿದೆಯಡಿಯಲ್ಲಿ ಪ್ರ.ಸಂ.73/1999-2000 ರಂತೆ ದಾಖಲಾಗಿದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳುಕ ಕೊಪ್ಪ ರವರು ಮೇಲ್ಕಂಡ ಒತ್ತುವರಿ ಜಮೀನನ್ನು ಖುಲ್ಲಾ ಪಡಿಸಿ, ಸದರಿ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ ಆದೇಶ ಮಾಡಿರುತ್ತಾರೆ ಎಂದು ತಿಳಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 3) ಪ್ರಾಸಾ-1 ಮತ್ತು 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದರ ವಿರುದ್ಧ ಆರೋಪಿತರಾದ ನೀವುಗಳು ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ವಜಾ ಗೊಂಡು ನಂತರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು ರವರ ಆದೇಶದಂತೆ ಒತ್ತುವರಿ ಜಮೀನನ್ನು ಇಲಾಖಾ ವಶಕ್ಕೆ ಪಡೆಯಲು ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು ನೋಟೀಸು ನೀಡಿದ್ದರೂ ಸಹ ಪ್ರತಿಕ್ರಿಯೇ ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 4) ಪ್ರಾಸಾ-1 ಮತ್ತು 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಒತ್ತುವರಿ ಜಾಗಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಅನೇಕ ಕಾಡುಜಾತಿಯ ಮನ್ನಾಜಾತಿ ಮರಗಳನ್ನು ಮರಗಚ್ಚು ಮರಡಿ ಸಾಯಿಸಿರುವುದು ಕಂಡುಬಂದಿದ್ದು, ಸದರಿ ಮರಗಳನ್ನು ಅಳತೆ ಮಾಡಿ, ಕೆಂಪು ಬಣ್ಣದಿಂದ ಕ್ರ.ಸಂ. ನೀಡಿ, ವಲಯ ಅರಣ್ಯಾಧಿಕಾರಿಗಳಿಗೆ ವರದಿ ನೀಡಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 5) ಪ್ರಾಸಾ-1 ಮತ್ತು 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳ ಆದೇಶದಂತೆ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿ, ಅನುಮತಿ ಪಡೆದು, ದಿನಾಂಕಃ 25.05.2015 ರಂದು ಆರೋಪಿತರಾದ ನಿಮ್ಮಗಳ ವಿರುದ್ಧ ಪ್ರಕಾರಣ ಸಂ.5/201-16 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 6) ಪ್ರಾಸಾ-1 ಮತ್ತು 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-3 ಮತ್ತು 4 ರವರೊಂದಿಗೆ ಒತ್ತುವರಿ ಜಮೀನಿಗೆ ಭೇಟಿ ನೀಡಿ, ಪರಿಶೀಲಿಸಿ, ಮಹಜರ್ ಕ್ರಮ

ಜರುಗಿಸಿ, ಛಾಯಾಚಿತ್ರ ತೆಗೆದು, ಚಾಸಾ-2 ಮತ್ತು 3 ರವರ ಸಹಿ ಪಡೆದು, ಪ್ರಥಮ ವರ್ತಮಾನ ವರದಿ, ಅಮಾನತ್ತು ಮಹಜರ್ ಹಾಗೂ ಮರದ ಅಳತೆ ಪಟ್ಟಿಯನ್ನು ನ್ಯಾಯಾಲಯದ ಅವಗಾಹನೆಗೆ ಸಲ್ಲಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 7) ಪ್ರಾಸಾ-4 ಹೆಚ್.ಸಿ. ಕೃಷ್ಣಮೂರ್ತಿ ರವರು ತಮ್ಮ ಸಾಕ್ಷ್ಯದಲ್ಲಿ ಕಳಸ ವಲಯದ ವಲಯ ಅರಣ್ಯಾಧಿಕಾರಿಗಳು ಕೊಪ್ಪ ವಿಭಾಗದ ಮೋಜಣಿ ಘಟಕಕ್ಕೆ ಬರೆದಿರುವ ಪತ್ರದ ಸಂಖ್ಯೆ.1006/2014-15 ರ ದಿ.16.03.2015 ರ ಪತ್ರದಲ್ಲಿ, ಮೂಡಿಗೆರೆ ತಾಲ್ಲೂಕು ಹಾದುಓಣಿ ಗ್ರಾಮದ ಸರ್ಕಾರಿ ಸ.ನಂ.22/23 ರಲ್ಲಿ ಆರೋಪಿತರಾದ ನೀವುಗಳು ಮತ್ತು ಇತರರು ಸದರಿ ಸ.ನಂ. ನಲ್ಲಿ ಮರಗಳಿಗೆ ಸುತ್ತುಪಟ್ಟಿ ಮಾಡಿರುವ ಬಗ್ಗೆ ಕಳಸ ವಲಯದ ಕೂವೆ ಶಾಖೆಯ ಉಪವಲಯ ಅರಣ್ಯಾಧಿಕಾರಿಗಳು ವರದಿ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 8) ಪ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ವರದಿಯ ಮೇರೆಗೆ ಸದರಿ ಸ.ನಂ. ಗಳನ್ನು ಮೋಜಣಿ ಮಾಡಿ, ಗಡಿ ಗುರುತಿಸಿ, ಎಲ್ಲಿ ಮರಗಳ ಪಟ್ಟಿಯನ್ನು ತಯಾರಿಸಿ, ವರದಿ ನೀಡುವಂತೆ ಕೋರಿ, ಸದರಿ ವಲಯದ ಸಿಬ್ಬಂಧಿಗಳೊಂದಿಗೆ ಹಾದುಓಣಿ ಗ್ರಾಮದ ಗ್ರಾಮ ನಕಾಶೆಯಂತೆ ಸರ್ಕಾರಿ ಸ.ನಂ.23 ರ ಪ್ರದೇಶವನ್ನು ಮೋಜಣಿ ಮಾಡಿ ನಕಾಶೆ ತಯಾರಿಸಿ 3 ಬ್ಲಾಕ್ ಗಳಾಗಿ ವಿಂಗಡಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 9) ಪ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ 1 ನೇ ಬ್ಲಾಕ್ ನಲ್ಲಿ 1 ರಿಂದ 26 ರ ಎಲೆ ಮರಗಳ ಪಟ್ಟಿಯನ್ನು, 2 ನೇ ಬ್ಲಾಕ್ ನಲ್ಲಿ 1 ರಿಂದ 10 ರ ಎಲೆ ಮರಗಳ ಪಟ್ಟಿಗಳು, 3 ನೇ ಬ್ಲಾಕ್ ನಲ್ಲಿ 1 ರಿಂದ 13 ರವರೆಗೆ ಎಲೆ ಮರಗಳ ಪಟ್ಟಿಯನ್ನು ತಯಾರಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 10) ಪ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿಯವರು ಹಾದುಓಣಿ ಗ್ರಾಮದ ಸರ್ಕಾರಿ ಸ.ನಂ.2 3 ರಲ್ಲಿ, 134.19 ಎಕರೆ ಪ್ರದೇಶವನ್ನು

ಅನಧಿಕೃತವಾಗಿ ಒತ್ತುವಾರಿ ಮಾಡಿ ಕಾಫೀ, ಅಡಿಕೆ ಮತ್ತು ಇತರೆ ಬೆಳೆಗಳನ್ನು ಬೆಳೆದಿರುವ ಬಗ್ಗೆ ನಾಕಾಶೆಯೊಂದಿಗೆ ಎಲೆಮರದ ಪಟ್ಟಿಯನ್ನು ಕಳಸ ವಲಯ ಅರಣ್ಯಾಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 11) ಪ್ರಾಸಾ-5 ಪಿ.ಎಲ್.ಪ್ರಹಲ್ಲಾದ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.23.05.2015 ರಂದು ಕೂವೆ ಶಾಖೆಯ ಉಪ-ವಲಯ ಅರಣ್ಯಾಧಿಕಾರಿಯಾದ ಚಾಸಾ-1 ರವರು ಕಛೇರಿಗೆ ಹಾಜರಾಗಿ, ಹಾದಿಹೋಣಿ ಗ್ರಾಮದ ಸ.ನಂ.22 ಮತ್ತು 23 ರ ಒತ್ತುವರಿ ಪ್ರದೇಶದಲ್ಲಿ ಆರೋಪಿತರಾದ ನೀವುಗಳು, ಸದರ ಒತ್ತುವರಿ ಪ್ರದೇಶದಲ್ಲಿ ಕಾಡು ಜಾತಿಯ ಮರಗಳ ತೊಗಡೆಯನ್ನು ತೆಗೆದು ಮರಗಳನ್ನು ಸಾಯಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 12) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವುಗಳನ್ನು ಅವರು ಎಣಿಕೆ ಮಾಡಿ, ಅಳತೆ ಮಾಡಿ ಮತ್ತು ಕೆಂಪು ಬಣ್ಣದಿಂದ ಅವುಗಳನ್ನು ಗುರುತಿಸಿ, ಅವುಗಳ ಫೋಟೋಗಳನ್ನು ತೆಗೆದು ಅವರ ಅವಗಹನೆಗೆ ಒಪ್ಪಿಸಿ, ವರದಿಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 13) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆ ಪ್ರಕಾರ ನಾನು ದಿ.23.05.2015 ರಂದು ಆರೋಪಿತರಾದ ನಿಮಗಳ ವಿರುದ್ಧ ಆರೋಪ ಸಾಬೀತಾದ ಕಾರಣ ನಿಮ್ಮಗಳ ವಿರುದ್ಧ ಪ್ರಕರಣವನ್ನು ದಾಖಲು ಮಾಡಲು ಚಾಸಾ-1 ರವರಿಗೆ ಆದೇಶ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 14) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದರಂತೆ ದಿ.25.05.2015 ರಂದು ಮಾನ್ಯ ನ್ಯಾಯಾಲಯದಿಂದ ಅನುಮತಿಯನ್ನು ಪಡೆದು, ಅವರು ಎಫ್.ಒ.ಸಿ.5/2015-16 ರಡಿಯಲ್ಲಿ ಆರೋಪಿತರಾದ ನಿಮ್ಮಗಳ ವಿರುದ್ಧ ಪ್ರಕರಣವನ್ನು ದಾಖಲಿಸಿ, ಪ್ರ.ವ.ವ, ಮಹಜರ್ ನ ವರದಿ, ಅಮಾನತು ವರದಿಯನ್ನು ನೀಡಿರುವುದಾಗಿ ಸಾಕ್ಷ್ಯ

ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 15) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಈ ಹಿಂದೆ ಆರೋಪಿತರಾದ ನೀವುಗಳು ಹಾದಿಹೋಣಿ ಗ್ರಾಮದ ಸ.ನಂ.22 ಮತ್ತು 23 ರಲ್ಲಿ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುವ ಕುರಿತು, ನಿಮ್ಮಗಳ ವಿರುದ್ಧ ಎಫ್.ಒ.ಸಿ.ನಂ.73/1999-2000 ನೇ ಸಾಲಿನಲ್ಲಿ ಒಂದು ಪ್ರಕರಣವು ದಾಖಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 16) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಪ್ರಕಾರ ಕೊಪ್ಪ ತಾಲ್ಲೂಕಿನ ಕೊಪ್ಪದ ಉಪ-ವಲಯ ಅರಣ್ಯಾಧಿಕಾರಿಗಳ ಮೋಜಣಿ ಘಟಕಕ್ಕೆ ಸದರಿ ಒತ್ತುವರಿ ಜಮೀನು ಮತ್ತು ಹಿಡುವಳಿ ಜಮೀನಿನ ಕುರಿತು ಪ್ರತ್ಯೇಕವಾಗಿ ಮೋಜಣಿ ಮಾಡಿ, ವರದಿ ನೀಡುವಂತೆ ಮನವಿಯನ್ನು ಮಾಡಿ, ಅದರ ಬಾಬ್ತು ಕೊಪ್ಪದ ಉಪ-ವಲಯ ಅರಣ್ಯಾಧಿಕಾರಿಗಳ ಮೋಜಣಿ ಘಟಕದವರು ಸ್ಥಳಕ್ಕೆ ಭೇಟಿ ನೀಡಿ, ಮೋಜಣಿ ಕ್ರಮ ಜರುಗಿಸಿ ವರದಿಯನ್ನು ನೀಡಿರುವುದಾಗಿ  ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 17) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ದಿ.30.05.2015 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ, ಚಾಸಾ-1 ರವರು ನೀಡಿದ ವರದಿಯ ಬಾಬ್ತು ಸ್ಥಳ ಪರಿಶೀಲಿಸಲಾಗಿ, ತೊಗಟೆ ತೆಗೆದು ಸಾಯಿಸಿದ ಮರಗಳು ಒತ್ತುವರಿಯಾಗಿದ್ದ ಅರಣ್ಯ ಪ್ರದೇಶದ ಒಳಗೆ ಇರುವುದು ತಿಳಿದುಬಂದಿದ್ದು, ನಂತರ ಸ.ನಂ.22 ಮತ್ತು 23 ರ ಜಮೀನಿನ ಪಹಣಿಯನ್ನು ಪರಿಶೀಲಿಸಿ, ಸ.ನಂ.23 ರಲ್ಲಿ 300 ಎಕರೆ ಅರಣ್ಯ ಪ್ರದೇಶ ಮತ್ತು ಸ.ನಂ.22 ರಲ್ಲಿ 200 ಎಕರೆ ಅರಣ್ಯ ಪ್ರದೇಶ ಇರುವುದು ಕಂಡುಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 18) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದರ ಬಾಬ್ತು 2022 ನೇ ಇಸವಿಯಲ್ಲಿ ಮಾನ್ಯ ಜಿಲ್ಲಾಧಿಕಾರಿ, ಚಿಕ್ಕಮಗಳೂರು ರವರು ಹಾದಿಹೋಣಿಯ ಸ.ನಂ.22 ಮತ್ತು 23 ರನ್ನು ಒಳಗೊಂಡಂತೆ ಇತರೆ ಸ.ನಂ. ಗಳ ಜಮೀನು ಅರಣ್ಯ ಪ್ರದೇಶಕ್ಕೆ

ಮೀಸಲಿಡಲಾಗಿರುವ ದಟ್ಟ ಅರಣ್ಯ ಪ್ರದೇಶ ಎಂದು ಘೋಷಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 19) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.01.07.2015 ರಂದು ಆರೋಪಿತರಾದ ನಿಮ್ಮಗಳಿಗೆ ಕಛೇರಿಗೆ ಹಾಜರಾಗುವಂತೆ ನೋಟೀಸನ್ನು ಜಾರಿ ಮಾಡಿದ್ದು, ಅದರಂತೆ ನೀವುಗಳು ನೋಟೀಸಿನ ಬಾಬ್ತು ಕಛೇರಿಗೆ ಹಾಜರಾಗಿದ ಕಾರಣ ಆರೋಪಿತರಾದ ನಿಮ್ಮಗಳ ಕೃತ್ಯ ಕಾನೂನು ಬಾಹಿರವಾದ ಕಾರಣ ನಾನು ಉಪ-ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಪ್ಪ ರವರಿಗೆ ವಿಚಾರಣಾ ವರದಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 20) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ವಿಚಾರಣಾ ವರದಿಯ ಬಾಬ್ತು ಕೊಪ್ಪದ ಉಪ-ಅರಣ್ಯ ಸಂರಕ್ಷಣಾಧಿಕಾರಿಗಳು ಚಾಸಾ-13 ಮತ್ತು 14 ರವರಿಗೆ ಸ್ಥಳಕ್ಕೆ ಭೇಟಿ ನೀಡುವಂತೆ ಪತ್ರದ ಮುಖೇನ ಮನವಿ ಮಾಡಿ, ದಿ.19.01.2016 ರಿಂದ ದಿ.21.01.2016 ರವರೆಗೆ ಚಾಸಾ-13 ಮತ್ತು 14 ರವರು ಸ್ಥಳ ಪರಿಶೀಲಿಸಿ, ತೊಗಟೆ ತೆಗೆದ ಮರಗಳು ಯಾವ ರೀತಿ ಸತ್ತು ಹೋಗಿರುತ್ತವೆ ಎಂಬುದರ ಕುರಿತು ವರದಿಯನ್ನು ತಯಾರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 21) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಕಾರಣಗಳನ್ನು ನಮೂದಿಸಿ, ಕೊಪ್ಪದ ಉಪ-ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ವರದಿ ನೀಡಿ, ಸದರಿ ವರದಿಯ ಬಾಬ್ತು ಕೊಪ್ಪದ ಉಪ-ಅರಣ್ಯ ಸಂರಕ್ಷಣಾಧಿಕಾರಿಗಳು ಆದೇಶದಂತೆ ಆರೋಪಿತರಾದ ನಿಮ್ಮಗಳ ದೋ.ಪ.ಯನ್ನು ತಯಾರಿಸಿ, ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 22) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

ಪ್ರಶ್ನೆಃ 23) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

1 ರಿಂದ 3 ಮತ್ತು 5 ನೇ ಆರೋಪಿತರ ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

sd/-

ಮೂಡಿಗೆರೆ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ

ದಿನಾಂಕಃ 26.09.2025. ನ್ಯಾಯಾಲಯ, ಮೂಡಿಗೆರೆ.